ನಿಜಕ್ಕೂ ಬ್ಯಾಂಕುಗಳು ಆತಂಕದಲ್ಲಿವೆಯೇ? ಸಾಲ ಕೊಟ್ಟು ದಿವಾಳಿ ಆಗಿವೆಯೇ?

ನಿಮ್ಮ ಬ್ಯಾಂಕು ಎಷ್ಟು ಸೇಫು?

ಎಂಕ್ಯಾಪ್ ಲೆಕ್ಕಕ್ಕಿಲ್ಲ, ಸಿಆರ್‌ಎಆರ್ ಅನುಪಾತವೇ ಅಂತಿಮ

• ಧನರಾಜ್

ಮೊನ್ನೆ ಮೊನ್ನೆ ಎಸ್ ಬ್ಯಾಂಕಿನ ವಹಿವಾಟುಗಳನ್ನೆಲ್ಲ ಸ್ಥಗಿತಗೊಳಿಸಿ, ಐವತ್ತು ಸಾವಿರಕ್ಕಿಂತ ಹೆಚ್ಚು ವಿತ್‌ಡ್ರಾ ಮಾಡುವಂತಿಲ್ಲ ಎಂದು ಕಟ್ಟುಪಾಡು ಹಾಕಿದ್ದೇ ತಡ, ಗ್ರಾಹಕರೆಲ್ಲ ಬ್ಯಾಂಕಿನ ಮುಂದೆ ಸರದಿಯ ಸಾಲಲ್ಲಿ ನಿಂತದ್ದನ್ನು ನಾವೆಲ್ಲ ನೋಡಿದ್ದೇವೆ. ಇಂಥ ಪ್ರಸಂಗಗಳು ಹಲವಾರು ಬ್ಯಾಂಕುಗಳ ವಿಚಾರದಲ್ಲೂ ಈ ಹಿಂದೆ ಹಲವು ಸಲ ನಡೆದಿವೆ. ಈಗಂತೂ ಹೊಸ ಹೊಸ ಬ್ಯಾಂಕುಗಳು ಹುಟ್ಟಿಕೊಳ್ಳುವುದೂ ಕಣ್ಮರೆಯಾಗುವುದೂ ತೀರಾ ಸಹಜ ಎಂಬಂತೆ ನಡೆಯುತ್ತಿವೆ. ನಷ್ಟದಲ್ಲಿರುವ ಬ್ಯಾಂಕುಗಳನ್ನು ಆರೋಗ್ಯವಂತ ಬ್ಯಾಂಕುಗಳ ಜೊತೆ ಕೂಡಿಕೆ ಮಾಡಿಸಿ, ಸಂಸಾರ ಮಾಡಿಸುವ ಯೋಜನೆಗಳೂ ಚಾಲ್ತಿಗೆ ಬಂದು, 'ನಿಷ್ಠಾವಂತ' ಗ್ರಾಹಕರ ಕಣ್ಣು ಕೆಂಪಾಗುವಂತೆ ಮಾಡಿದೆ.

ಈ ಮಧ್ಯೆ ಯಾವ ಬ್ಯಾಂಕು ಎಷ್ಟು ಸುರಕ್ಷಿತ ಎನ್ನುವುದನ್ನು ಪತ್ತೆ ಹಚ್ಚುವ ಪತ್ತೇದಾರರೂ ಕಾಣಿಸಿಕೊಂಡಿದ್ದಾರೆ. ಒಬ್ಬೊಬ್ಬರು ಒಂದೊಂದು ಮಾನದಂಡವನ್ನು ಮುಂದಿಟ್ಟುಕೊಂಡು ಬ್ಯಾಂಕುಗಳ ಆರೋಗ್ಯ ಕಂಡುಹಿಡಿಯುತ್ತಾ ಗ್ರಾಹಕರ ಎದೆಯಲ್ಲಿ ಆವಲಕ್ಕಿ ಕುಟ್ಟುವುದಕ್ಕೆ ಶುರುವಾಗಿದೆ. ಹೂಡಿಕೆಯ ಎಲ್ಲಾ ಮಾರ್ಗಗಳೂ ಬಹುತೇಕ ಮುಚ್ಚಿಹೋಗಿ, ಸಂಪಾದನೆ ಮಾಡಿದ ಹಣವನ್ನು ಬ್ಯಾಂಕಿನಲ್ಲಿ ಇಡುವುದೇ ಏಕೈಕ ದಾರಿಯೆಂದು ನಂಬಿದವರನ್ನು ಕಂಗೆಡಿಸುವುದಕ್ಕೆಂದೇ ಈ ಲೆಕ್ಕಾಚಾರಗಳು ಹುಟ್ಟಿಕೊಂಡಂತಿವೆ.

ನಿಜಕ್ಕೂ ಬ್ಯಾಂಕುಗಳು ಆತಂಕದಲ್ಲಿವೆಯೇ? ಸಾಲ ಕೊಟ್ಟು ದಿವಾಳಿ ಆಗಿವೆಯೇ? ಆರೇಳು ತಿಂಗಳುಗಳಿಂದ ಬ್ಯಾಂಕಿನ ಮೇಲೆ ಕಣ್ಣಿಟ್ಟುಕೊಂಡಿದ್ದ ರಿಸರ್ವ್ ಬ್ಯಾಂಕು, ಮೊದಲೇ ಯಾಕೆ ಕ್ರಮ ಕೈಗೊಳ್ಳಲಿಲ್ಲ. ರಿಸರ್ವ್‌ಬ್ಯಾಂಕು ಕಾಲಕಾಲಕ್ಕೆ ಬ್ಯಾಂಕುಗಳ ಸ್ಥಿತಿಗತಿಯ ಕುರಿತು ಗ್ರಾಹಕರಿಗೆ ಯಾಕೆ ಮಾಹಿತಿ ನೀಡುವುದಿಲ್ಲ ಮುಂತಾದ ಪ್ರಶ್ನೆಗಳೂ ಹುಟ್ಟಿಕೊಂಡಿವೆ. ಬ್ಯಾಂಕುಗಳ ಕುರಿತಾಗಿರುವ ಭಯವನ್ನು ಹೆಚ್ಚುಮಾಡಲಿಕ್ಕೆಂದೇ ಈಗ ವೆಬ್‌ಸೈಟುಗಳೂ, ರಾಷ್ಟ್ರೀಯ ವಾಹಿನಿಗಳೂ, ಸಾಮಾಜಿಕ ಜಾಲತಾಣಗಳೂ ಪೈಪೋಟಿಯಲ್ಲಿ ಶ್ರಮಿಸುತ್ತಿವೆ.

ಇಂಥ ಹೊತ್ತಲ್ಲಿ ನಿಜಕ್ಕೂ ಬ್ಯಾಂಕು ಎಷ್ಟು ಆರೋಗ್ಯವಂತ ಎಂದು ತಿಳಿಯುವುದು ಹೇಗೆ? ಯಾವ ಮಾನದಂಡವನ್ನು ಬಳಸಿ ಬ್ಯಾಂಕಿನ ಆರ್ಥಿಕ ಸ್ಥಿಮಿತವನ್ನು ಲೆಕ್ಕ ಹಾಕಬಹುದು? ಇಲ್ಲಿದೆ ಮಾಹಿತಿ. ಯಾವುದೇ ಸಂಸ್ಥೆಯ ಆರೋಗ್ಯವನ್ನು ಗುರುತಿಸಲು ಬೇಕಾಗಿರುವುದು ಕೆಲವು ಅನುಪಾತಗಳು. ಅವುಗಳು ಅಚ್ಚುಕಟ್ಟಾಗಿದ್ದರೆ, ಸಂಸ್ಥೆ ಸುಸ್ಥಿತಿಯಲ್ಲಿದೆ ಎಂದು ತಿಳಿಯಬಹುದು. ಉದಾಹರಣೆಗೆ ಒಬ್ಬ ವ್ಯಕ್ತಿಯ ಆದಾಯ ಮತ್ತು ಖರ್ಚಿನ ಅನುಪಾತದಿಂದ ಆತನ ಆರ್ಥಿಕ ಸ್ಥಿತಿ ತಿಳಿಯುವಂತೆ, ಆತನ ಸಾಲ ಮತ್ತು ಆಸ್ತಿಯ ಅನುಪಾತದಿಂದ ಆತ ದಿವಾಳಿಯಾಗುತ್ತಾನೋ ಇಲ್ಲವೋ ಗೊತ್ತಾಗುವಂತೆ, ಸಂಸ್ಥೆಗಳಿಗೂ ಕೆಲವು ಅನುಪಾತಗಳಿವೆ.

ಇಂಥ ಇನ್ನೊಂದೆರಡು ಅನುಪಾತಗಳ ಮೂಲಕ ಬ್ಯಾಂಕಿನ ಆರೋಗ್ಯ ಹೇಗಿದೆ ಎಂದು ತಿಳಿದುಕೊಳ್ಳುವುದು ನಡೆದುಕೊಂಡು ಬಂದ ಕ್ರಮ. ಸಾಂಪ್ರದಾಯಿಕವಾದ ಮಾನದಂಡಗಳು ಇವು. ಇತ್ತೀಚೆಗೆ ಹರಿದಾಡುತ್ತಿರುವ ಹೊಸ ಅನುಪಾತ ಎಂಕ್ಯಾಪ್ ರೇಷಿಯೋದಿಂದ ಬ್ಯಾಂಕಿನ ದುಸ್ಥಿತಿ ತಿಳಿಯಬಹುದು ಎಂದು ವಾದಿಸುತ್ತಿರುವುದನ್ನು ನಾವು ನೋಡಬಹುದು. ಆದರೆ ಇದು ಸರಿಯಾದ ಕ್ರಮ ಅಲ್ಲ ಎಂದು ಮುಖ್ಯ ಆರ್ಥಿಕ ಸಲಹಾಕಾರ ಕೃಷ್ಣಮೂರ್ತಿ ಸುಬ್ರಮಣಿಯನ್ ಹೇಳಿದ್ದಾರೆ.

ಮಾರ್ಕೆಟ್ ಕ್ಯಾಪಿಟಲೈಸೇಷನ್ ಅನುಪಾತವನ್ನೂ ಯಾವುದೇ ಬ್ಯಾಂಕಿಂಗ್ ತಜ್ಞನಾಗಲೀ, ಬ್ಯಾಂಕಿಂಗ್ ನಿಯಂತ್ರಣ ಮಂಡಳಿಗಳಾಗಲೀ ಮುಖ್ಯ ಎಂದು ಭಾವಿಸುವುದೇ ಇಲ್ಲ. ಕ್ಯಾಪಿಟಲ್ ಟು ರಿಸ್ಕ್‌ವೆಯ್ಟ್ ಆಸೆಟ್ಸ್ ರೇಷಿಯೋ ಮಾತ್ರ ಮುಖ್ಯ. ಅದನ್ನೇ ಸಿಆರ್‌ಎಆರ್ ಎಂದು ಕರೆಯುತ್ತಾರೆ.

ಈ ಸಿಆರ್‌ಎಆರ್ ಶೇ.8ರಷ್ಟಿದ್ದರೆ ಸಾಕು. ಭಾರತೀಯ ಬ್ಯಾಂಕುಗಳ ಸರಾಸರಿ ಸಿಆರ್‌ಎಆರ್ 14.3 ಶೇಕಡಾ ಇದೆ. ಈ ಅನುಪಾತಗಳನ್ನು ಸಾಮಾನ್ಯ ಗ್ರಾಹಕ ಕಂಡು ಹಿಡಿಯುವುದು ಹೇಗೆ? ಅದಕ್ಕೆ ಬೇಕಾದ ಮಾಹಿತಿಗಳು ಎಲ್ಲಿ ಸಿಗುತ್ತವೆ ಎಂಬುದು ಬಹುದೊಡ್ಡ ಪ್ರಶ್ನೆ. ಆದರೆ, ವಿತ್ತ ಪತ್ರಿಕೆಗಳನ್ನು ಗಮನಿಸುವವರಿಗೆ ಕಾಲಕಾಲಕ್ಕೆ ಆ ಮಾಹಿತಿಗಳನ್ನು ಬ್ಯಾಂಕುಗಳು ತಾವಾಗಿಯೇ ಬಿಡುಗಡೆ ಮಾಡುತ್ತವೆ ಅನ್ನುವುದು ಗೊತ್ತಿರುತ್ತದೆ.

1. **ಗ್ರಾಸ್ ಎನ್‌ಪಿಎ ರೇಷಿಯೋ:** ಬ್ಯಾಂಕುಗಳಲ್ಲಿ ನಾನ್ ಪರ್‌ಫಾರ್ಮಿಂಗ್ ಆಸೆಟ್ ಇರುತ್ತವೆ. ಕಳೆದ ಮೂರು ತಿಂಗಳಿಂದ ಬಡ್ಡಿ ಬರದೇ ಇರುವ ಸಾಲಗಳೆಲ್ಲವೂ ಎನ್‌ಪಿಎ ಅನ್ನಿಸಿಕೊಳ್ಳುತ್ತವೆ. ಇದನ್ನು ಕಂಡುಹಿಡಿಯಲು ಗ್ರಾಸ್ ಎನ್‌ಪಿಎಯನ್ನು ಒಟ್ಟು ಸಾಲದಿಂದ ಭಾಗಿಸಿ, ಆದರ ಶೇಕಡಾವಾರು ಕಂಡುಹಿಡಿದರಾಯಿತು. ಇದು ಹೆಚ್ಚಿದ್ದಷ್ಟು ಬ್ಯಾಂಕಿಗೆ ಕುತ್ತು.
2. **ನೆಟ್ ಎನ್‌ಪಿಎ ರೇಷಿಯೋ:** ಕೆಲವು ವಸೂಲಿಯಾಗದ ಸಾಲಗಳನ್ನು ಬ್ಯಾಂಕು ಬಿಟ್ಟುಬಿಡುತ್ತದೆ. ಆಗ ಸಿಗುವ ನೆಟ್ ನಾನ್‌ಪರ್‌ಫಾರ್ಮಿಂಗ್ ಆಸೆಟ್‌ಗಳ ಅನುಪಾತ ಬ್ಯಾಂಕು ದೀರ್ಘಕಾಲದ ತೊಂದರೆಯಲ್ಲಿದೆ ಎಂದು ಹೇಳುತ್ತದೆ.
3. **ಪ್ರಾವಿಷನ್ ಕವರೇಜ್ ರೇಷಿಯೋ:** ಇದು ಮರಳಿ ಬಾರದ ಸಾಲಗಳನ್ನು ನಿಭಾಯಿಸಲು ಬ್ಯಾಂಕು ಮಾಡಿಕೊಂಡಿರುವ ವ್ಯವಸ್ಥೆಯ ಗುಣಮಟ್ಟವನ್ನು ಹೇಳುತ್ತದೆ. ಈ ಅನುಪಾತ ಹೆಚ್ಚಿದ್ದಷ್ಟೂ ಬ್ಯಾಂಕಿಗೆ ಅಪಾಯ ಕಡಿಮೆ.
4. **ಕ್ಯಾಪಿಟಲ್ ಅಡಿಕ್ವೆಸಿ ರೇಷಿಯೋ:** ಇದು ಕನಿಷ್ಠ ಶೇಕಡಾ 9ರಷ್ಟು ಇರತಕ್ಕದ್ದು ಎಂಬ ನಿಯಮವೇ ಇದೆ. ಒಟ್ಟು ಬಂಡವಾಳ ಮತ್ತು ಒಟ್ಟು ಅಪಾಯದಲ್ಲಿರುವ ಆಸೆಟ್‌ಗಳ ಅನುಪಾತ ಇದು. ಇದು ಹೆಚ್ಚಿದ್ದಷ್ಟೂ ಬ್ಯಾಂಕು ಸುಸ್ಥಿತಿಯಲ್ಲಿದೆ ಎಂದು ಅರ್ಥ.
5. **ಕಾಸಾ ರೇಷಿಯೋ:** ಇದು ಚಾಲ್ತಿ ಮತ್ತು ಉಳಿತಾಯ ಖಾತೆಗಳ ಮತ್ತು ಒಟ್ಟು ಠೇವಣಿಗಳ ನಡುವಿನ ಅನುಪಾತವನ್ನು ಹೇಳುತ್ತದೆ. ಈ ಅನುಪಾತ ಹೆಚ್ಚಿದ್ದರೆ, ಬ್ಯಾಂಕುಗಳಿಗೆ ನಿಧಿಯನ್ನು ನಿಭಾಯಿಸುವ ವೆಚ್ಚ ಕಡಿಮೆಯಾಗುತ್ತದೆ ಹೀಗಾಗಿ ಲಾಭ ಹೆಚ್ಚಾಗುತ್ತದೆ.
6. **ನೆಟ್ ಇಂಟರೆಸ್ಟ್ ಮಾರ್ಜಿನ್:** ಪಡೆದ ಬಡ್ಡಿ ಮತ್ತು ನೀಡಿದ ಬಡ್ಡಿಯ ನಡುವಣ ಅನುಪಾತ ಇದು. ಈ ಅನುಪಾತದ ಶೇಕಡಾವಾರು ಹೆಚ್ಚಿದ್ದಷ್ಟೂ ಒಳ್ಳೆಯದು.
7. **ರಿಟರ್ನ್ ಆನ್ ಅಸೆಟ್ಸ್:** ಬ್ಯಾಂಕು ತನ್ನ ಆಸ್ತಿಯನ್ನು ಹೇಗೆ ಬಳಕೆ ಮಾಡುತ್ತದೆ. ಅದರಿಂದ ಎಷ್ಟು ಆದಾಯ ಬರುತ್ತದೆ ಅನ್ನುವುದನ್ನು ಇದು ಹೇಳುತ್ತದೆ. ಈ ಅನುಪಾತ ಹೆಚ್ಚಿದ್ದಷ್ಟೂ ಲಾಭ.

ಕಂಪನಿ ವಾರ್ತೆ

ಬಜಾಜ್ ಡೊಮಿನಾರ್ 250 ಬೈಕ್

248.8 ಸಿಸಿ ಸಾಮರ್ಥ್ಯದ ಡೊಮಿನಾರ್ 250 ಬೈಕ್ ಅನ್ನು ಬಜಾಜ್ ಆಟೋ ಬಿಡುಗಡೆ ಮಾಡಿದೆ. ಅಡ್ವೆಂಚರ್ ಇಷ್ಟಪಡುವವರಿಗೆ, ಆಫ್ ಬೀಟ್ ರೈಡಿಂಗ್ ಅನ್ನು ಎನ್‌ಜಾಯ್ ಮಾಡುವವರಿಗೆ ಈ ಬೈಕ್ ಖಂಡಿತಾ ಇಷ್ಟವಾಗುತ್ತೆ ಅಂತ ಕಂಪೆನಿ ಹೇಳಿದೆ. ಏಕೆಂದರೆ ಎಂಥಾ ಏರಿಳಿತದ ಹಾದಿಯಲ್ಲೂ ಬೈಕ್ ಅನ್ನು ಆರಾಮವಾಗಿ ಹ್ಯಾಂಡಲ್ ಮಾಡುವ ಯುಎಸ್‌ಡಿ ಫೋರ್ಕ್ಸ್ ಡೊಮಿನಾರ್ 400 ಇದರಲ್ಲಿದೆ. 27 ಪಿಎಸ್ ಪವರ್ ಮತ್ತು 23.5 ಎನ್‌ಎಂ ಟಾರ್ಕ್ ಅನ್ನು ಈ ಬೈಕ್ ನೀಡಲಿದೆ. ಬಜಾಜ್ ಮೋಟರ್‌ಸೈಕಲ್ಸ್‌ನ ಅಧ್ಯಕ್ಷ ಸಾರಂಗ್ ಕಾನಡೆ, 'ಡೊಮಿನಾರ್ ಸವಾರರು ಐದು ಖಂಡಗಳನ್ನು ಸವಾರಿ ಮಾಡಿ ಸಾವಿರಾರು ಮೈಲಿ ಪ್ರಯಾಣ ಮಾಡಿದ್ದಾರೆ. ಡೊಮಿನಾರ್ 250 ಜಗತ್ತು ಸುತ್ತಲು ಹೇಳಿ ಮಾಡಿಸಿದ ಬೈಕ್' ಎಂದರು.

ಕೃತಿ ಸನೂನ್ ವಿವೆಲ್‌ನ ಬ್ರ್ಯಾಂಡ್ ಅಂಬಾಸಿಡರ್

ವಿವೆಲ್ ಬ್ರ್ಯಾಂಡ್‌ನ ಎಲ್ಲ ಉತ್ಪನ್ನಗಳಿಗೆ ಬ್ರ್ಯಾಂಡ್ ಅಂಬಾಸಿಡರ್ ಆಗಿ ಬಾಲಿವುಡ್ ನಟಿ ಕೃತಿ ಸನೂನ್ ಅವರನ್ನು ಆಯ್ಕೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ವಿವೆಲ್‌ನ ಬಾಡಿ ವಾಶ್ ಹಾಗೂ ಸೋಪ್‌ಗಳ ಪ್ರಚಾರ ಅಭಿಯಾನದಲ್ಲಿ ಕೃತಿ ಪಾಲ್ಗೊಳ್ಳಲಿದ್ದಾರೆ. ವಿವೆಲ್ ಬಿಡುಗಡೆ ಮಾಡಿರುವ ಪೋಸ್ಟರ್‌ಗಳಲ್ಲಿ ಒಂದರಲ್ಲಿ ಕೃತಿ ಟ್ರಾಫಿಕ್ ಪೊಲೀಸ್ ದಿರಿಸಿನಲ್ಲಿದ್ದಾರೆ. ಇನ್ನೊಂದರಲ್ಲಿ ಬೆನ್ನಿಗೆ ವಿವೆಲ್ ಅನ್ನು ಸಂಕೇತಿಸುವ 'ವಿ' ಅನ್ನುವ ಹಚ್ಚೆ ಹಾಕಿಸಿಕೊಂಡಿದ್ದಾರೆ. ಈ ಸಂದರ್ಭ ಕೃತಿ ಸನೂನ್, 'ವಿವೆಲ್‌ನಂಥಾ ವಿಶ್ವಾಸನೀಯ ಬ್ರ್ಯಾಂಡ್‌ಗೆ ರಾಯಭಾರಿ ಯಾಗುತ್ತಿರುವುದಕ್ಕೆ ಹೆಮ್ಮೆ ಇದೆ' ಎಂದರು. ಕಂಪೆನಿ ಸಿಇಒ ಸಮೀರ್ ಸತ್ಪತಿ, 'ಕೃತಿ ಸನೂನ್ ಅವರಂಥಾ ಡೈನಾಮಿಕ್ ನಟಿಯ ವಿವೆಲ್ ರಾಯಭಾರಿ ಯಾಗುವ ಜೊತೆಗೆ ನಮ್ಮ ಇಂಗಿತಕ್ಕೆ ಧ್ವನಿಯಾಗಿರುವುದಕ್ಕೆ ಸಂತೋಷವಾಗುತ್ತಿದೆ' ಎಂದಿದ್ದಾರೆ.

ಆ್ಯಂಡ್ರಾಯ್ಡ್ ಸೆಟಪ್ ಬಾಕ್ಸ್ ಡಿ2ಎಚ್ ಸ್ಟ್ರೀಮ್

ಡಿಶ್ ಟಿವಿ ಇಂಡಿಯಾದ ಬ್ರ್ಯಾಂಡ್ ಡಿ2ಎಚ್, ಆಂಡ್ರಾಯ್ಡ್ ಆಧಾರಿತ ಹೆಚ್‌ಡಿ ಸೆಟ್ ಟಾಪ್ ಬಾಕ್ಸ್ 'ಡಿ2ಎಚ್ ಸ್ಟ್ರೀಮ್' ಮತ್ತು ಅಲೆಕ್ಸಾದಿಂದ ಕಾರ್ಯಾಚರಿಸುವ ಧ್ವನಿ ಆಧಾರಿತ ಸ್ಟಿಕ್ ಅನ್ನು ಬಿಡುಗಡೆಗೊಳಿಸಿದೆ. ಇದರ ಮೂಲಕ ಅಮೆಜಾನ್ ಪ್ರೈಮ್, ಯೂಟ್ಯೂಬ್, ಝೀ 5 ಸೇರಿದಂತೆ ಓಟಿಟಿ ಪ್ಲಾಟ್‌ಫಾರ್ಮ್‌ನಲ್ಲಿ ಸಿನಿಮಾಗಳನ್ನು ನೋಡಬಹುದು. ಈ ಸೆಟಪ್ ಬಾಕ್ಸ್ ಮೂಲಕ ಟಿವಿ ಚಾನೆಲ್‌ಗಳನ್ನೂ ವೀಕ್ಷಿಸಬಹುದು.

ಸೆಟಪ್ ಬಾಕ್ಸ್ ಬೆಲೆ : 3999 ರು.
ಅಲೆಕ್ಸಾ ಧ್ವನಿ ಆಧಾರಿತ ಡಿ2ಎಚ್ ಮ್ಯಾಜಿಕ್ ಬೆಲೆ : 1,199 ರು.

ಸುಜುಕಿ ಆ್ಯಕ್ಸೆಸ್ 125 ಸ್ಕೂಟರ್‌ನಲ್ಲಿ ಮ್ಯಾಕ್ಸಿಸ್ ಟೈರುಗಳು

ಇತ್ತೀಚಿನ ಆತ್ಯಂತ ದೊಡ್ಡ ಟೈರು ತಯಾರಿಕಾ ಕಂಪನಿಗಳಲ್ಲಿ ಒಂದಾದ ಮ್ಯಾಕ್ಸಿಸ್ ಟೈರು ಕಂಪನಿ ಕೆಲವು ವರ್ಷಗಳಿಂದ ಭಾರತದಲ್ಲೂ ಕಾರ್ಯ ನಿರ್ವಹಿಸುತ್ತಿದೆ. ಅಹಮದಾಬಾದ್‌ನಲ್ಲಿ ಟೈರು ತಯಾರಿಕಾ ಘಟಕ ಸ್ಥಾಪಿಸಿರುವ ಕಂಪನಿ ಈಗಾಗಲೇ ಹೋಂಡಾ, ಹೀರೋ ಮೋಟೋಕಾರ್ಪ್, ಯಮಹಾ ಸ್ಕೂಟರ್, ಬೈಕುಗಳಿಗೆ ಟೈರು ತಯಾರಿಸಿ ನೀಡುತ್ತಿದೆ. ಇದೀಗ ಸುಜುಕಿ ಸಂಸ್ಥೆ ತನ್ನ ಮಹತ್ವದ ಆ್ಯಕ್ಸಿಸ್ 125 ಸ್ಕೂಟರ್‌ನಲ್ಲಿ ಮ್ಯಾಕ್ಸಿಸ್ ಟೈರುಗಳನ್ನೇ ಬಳಸಿಕೊಳ್ಳುವ ನಿರ್ಧಾರ ಮಾಡಿದೆ. ಹೊಸ ಆ್ಯಕ್ಸಿಸ್ 125 ಬಿಎಸ್6 ಸ್ಕೂಟರ್‌ನ ಎರಡೂ ಟೈರುಗಳು ಮ್ಯಾಕ್ಸಿಸ್ ಟೈರುಗಳೇ ಆಗಿರಲಿವೆ.

ಬಿಂಗ್ ಲಿನ್ ವು

ಈ ವಿಚಾರ ತಿಳಿಸಲು ಇತ್ತೀಚೆಗೆ ಮ್ಯಾಕ್ಸಿಸ್ ಟೈರ್ ಕಂಪನಿಯ ಮಾರ್ಕೆಟಿಂಗ್ ಹೆಡ್ ಬಿಂಗ್ ಲಿನ್ ವು ಬಂದಿದ್ದರು. '180 ದೇಶಗಳಲ್ಲಿ ಮ್ಯಾಕ್ಸಿಸ್ ಟೈರುಗಳು ಮಾರಾಟವಾಗುತ್ತಿದೆ. ಭಾರತದ ರಸ್ತೆಗಳನ್ನು ನೋಡಿಯೇ ವಿಶೇಷವಾಗಿ ಸಂಶೋಧನೆ ಮಾಡಿದ ಅತ್ಯುತ್ತಮ ಟೈರುಗಳನ್ನೇ ತಯಾರಿಸುತ್ತಿದ್ದೇವೆ' ಎಂದರು.

ಮ್ಯಾಕ್ಸಿಸ್ ಭಾರತದಲ್ಲಿ ತಯಾರಿಕಾ ಘಟಕ ಸ್ಥಾಪಿಸಿ ತುಂಬಾ ವರ್ಷಗಳೇನೂ ಆಗಿಲ್ಲ. ಎರಡು ಮೂರು ವರ್ಷ ಆಗಿದೆಯಷ್ಟೇ. ಮ್ಯಾಕ್ಸಿಸ್ ಟೈರುಗಳಿಗೆ ಬೇಡಿಕೆ ಜಾಸ್ತಿಯಾದ್ದರಿಂದ ಇನ್ನೊಂದು ಘಟಕ ತೆರೆಯುವ ಆಲೋಚನೆಯಲ್ಲಿದೆ ಕಂಪನಿ. 'ಮ್ಯಾಕ್ಸಿಸ್ ಸಂಸ್ಥೆ ಸ್ಕೂಟರ್‌ಗಳಷ್ಟೇ ಅಲ್ಲದೆ, ರಾಯಲ್ ಎನ್‌ಫೀಲ್ಡ್, ಜಾವಾ, ಬೆನೆಲ್ಲಿ ಥರದ ಹೆವೀ ಬೈಕುಗಳಿಗೂ ಟೈರುಗಳನ್ನು ತಯಾರಿಸುತ್ತಿದೆ. ಹೆಚ್ಚು ಬಾಳಿಕೆ ಬರುವ, ಮೈಲೇಜು ಜಾಸ್ತಿ ನೀಡುವ, ಒಳ್ಳೆಯ ರೋಡ್ ಗ್ರಿಪ್ ಹೊಂದಿರುವ ಟೈರುಗಳನ್ನೇ ತಯಾರಿಸಲು ಮ್ಯಾಕ್ಸಿಸ್ ಸಂಸ್ಥೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದೆ' ಎಂದರು.

ಟಿಟಿಕೆ ಪ್ರೆಸ್ಟೀಜ್‌ನ ಗ್ರೇಯ್ನ್ ಗ್ರೈಂಡರ್

ಹಿಟ್ಟು ರುಬ್ಬುವ ಗ್ರೈಂಡರ್‌ಗಳು ನಮಗೆಲ್ಲ ಗೊತ್ತು. ಈಗ ಧಾನ್ಯಗಳನ್ನು ಪುಡಿಮಾಡುವ ಗ್ರೈಂಡರ್‌ಗಳೂ ಮಾರುಕಟ್ಟೆಗೆ ಬಂದಿವೆ. ಟಿಟಿಕೆ ಪ್ರೆಸ್ಟೀಜ್ ಬಿಡುಗಡೆ ಮಾಡಿರುವ ಗ್ರೇಯ್ನ್ ಗ್ರೈಂಡರ್‌ನಿಂದ ಗೋಧಿ, ಓಟ್ಸ್, ಅಕ್ಕಿ, ಜೋಳ, ಬಿಳಿ ಜೋಳ, ಸಣ್ಣ ಗೋಧಿ ಸೇರಿದಂತೆ ಅನೇಕ ಧಾನ್ಯಗಳನ್ನು ಪುಡಿ ಮಾಡಬಹುದು ಅಂತ ಕಂಪೆನಿ ಹೇಳಿದೆ. ಇದು 180 ವ್ಯಾಟ್ ಸಾಮರ್ಥ್ಯದ ಮೋಟರ್ ಹೊಂದಿದ್ದು, ಗಂಟೆಗೆ 3 ರಿಂದ 5 ಕೆಜಿ ಧಾನ್ಯಗಳನ್ನು ಪುಡಿ ಮಾಡಬಲ್ಲದು.

ಬೆಲೆ : 9995 ರು.

ಬೆಲೆ: ₹799 ಗಳಿಂದ ಆರಂಭ

ಮುಫ್ಟಿಯ ಪುರುಷರ ಉಡುಗೆ ಸಂಗ್ರಹ

ಸಮ್ಮರ್ ಅಂದರೆ ತೆಳುವಾದ ಲೈಟ್ ಕಲರ್ ಬಟ್ಟೆಗಳನ್ನು ದೇಹ, ಮನಸ್ಸು ಬಯಸುತ್ತದೆ. ಇಂಥಾ ಮನಸ್ಥಿತಿಯನ್ನೇ ಕೇಂದ್ರವಾಗಿಟ್ಟುಕೊಂಡು ಪಾಸ್ಟಲ್ ಕಲರ್ ನಲ್ಲಿ ತನ್ನ ಬೇಸಿಗೆ ಸಂಗ್ರಹವನ್ನು ಮಾರುಕಟ್ಟೆಗೆ ಬಿಟ್ಟಿದೆ ಮುಫ್ಟಿ. ಈ ಉಡುಗೆಗಳಿಗೆ ಆರ್ಟಿಸ್ಟಿಕ್ ಲುಕ್ ಇದೆ. ಪುರುಷರ ಶರ್ಟ್, ಪ್ಯಾಂಟ್‌ಗಳಿಂದ ಹಿಡಿದು ಟ್ರೌಸರ್, ಶಾರ್ಟ್ಸ್, ಡ್ರೆಸ್‌ಗಳಿಗೆ ಸೂಟ್ ಆಗುವಂಥಾ ಚಪ್ಪಲಿಗಳೂ ಈ ಸಂಗ್ರಹದಲ್ಲಿವೆ.

ವು ಪ್ರೀಮಿಯಂನ 4ಕೆ ಟಿವಿ

ಬಜೆಟ್ ಬೆಲೆಯಲ್ಲಿ 4 ಕೆ ಟಿವಿಯನ್ನು ನೀಡಲು 'ವು ಟೆಲಿವಿಷನ್ಸ್' ಮುಂದಾಗಿದೆ. ಈ ಟಿವಿಗಳು ಮೂರು ಗಾತ್ರಗಳಲ್ಲಿ ಲಭ್ಯ. 43 ಇಂಚು, 50 ಇಂಚು ಹಾಗೂ 55 ಇಂಚುಗಳಲ್ಲಿ ಈ ಟಿವಿಗಳಿವೆ. ಆ್ಯಂಡ್ರಾಯ್ಡ್ 9.0 ಮೂಲಕ ಈ ಟಿವಿ ಕಾರ್ಯಾಚರಿಸುತ್ತದೆ. ಫ್ಲಿಪ್‌ಕಾರ್ಟ್‌ನಲ್ಲಿ ಈ ಟಿವಿಗಳು ಖರೀದಿಗೆ ಲಭ್ಯ. ಈ ಸಂದರ್ಭ ಮಾತನಾಡಿದ ವು ಟೆಲಿವಿಷನ್ಸ್‌ನ ಅಧ್ಯಕ್ಷ ಮತ್ತು ಸಿಇಒ ದೇವಿತಾ ಸರಾ, 'ಗ್ರಾಹಕರಿಗೆ ಗುಣಮಟ್ಟ ಹಾಗೂ ಸೇವೆಯಲ್ಲಿ ರಾಜಿಯಾಗದೆ ಕೈಗೆಟುಕುವ ಬೆಲೆಯಲ್ಲಿ ಅತ್ಯುತ್ತಮ ಉತ್ಪನ್ನ ಒದಗಿಸುವುದು ನಮ್ಮ ಗುರಿ. ಇದೀಗ ವು ಪ್ರೀಮಿಯಂ 4ಕೆ ಟಿ.ವಿ.ಬಿಡುಗಡೆ ಮಾಡುವ ಮೂಲಕ 4ಕೆಯಲ್ಲಿ ಹೊಸ ಯುಗ ಪ್ರಾರಂಭಿಸಿದೆ' ಎಂದರು.

ಬೆಲೆ: 24,999